ಸಾಕ್ಷಿಯನ್ನು ದಿನಾಂಕ **16-11-2022** ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಪಿ ಎಸ್ ಬಿ ವಕೀಲರಿಂದಃ**

ನನ್ನ ಹೆಸರು ಶ್ರೀನಾಥ್. ದಾವಾ ಐಟಂ.ನಂ.1 ರಿಂದ 6 ರ ಪೈಕಿ ನಮ್ಮ ಕುಟುಂಬಕ್ಕೆ ಮೊದಲು ಸ.ನಂ.192 ಬಂದಿತ್ತು. ಸದರಿ ಆಸ್ತಿಯನ್ನು ನಮ್ಮ ತಾತ ಸಂಪಾದಿಸಿದ್ದರು. ದಾವಾ ಐಟಂ.ನಂ.2 ರಿಂದ 6 ಆಸ್ತಿಗಳನ್ನು ನಮ್ಮ ತಾತನೇ ಸಂಪಾದಿಸಿದ್ದರು. ನಮ್ಮ ತಂದೆ ಊರಿನಲ್ಲಿ ಮನೆಯನ್ನು ಸಂಪಾದಿಸಿದ್ದರು. ನೀವೂಬ್ಬರೇ ಯಾವುದಾದರೂ ಆಸ್ತಿಯನ್ನು ಸಂಪಾದಿಸಿದ್ದೀರಾ ಎಂದರೆ ಸಾಕ್ಷಿ ನಾನು ದುಡಿಯುತ್ತಿದ್ದೆ ನಮ್ಮ ತಂದೆಯ ಹೆಸರಿನಲ್ಲಿ ಆಸ್ತಿಯನ್ನು ಸಂಪಾದಿಸಿದ್ದೇವು ಎಂದು ನುಡಿಯುತ್ತಾರೆ. ನಮ್ಮ ತಂದೆ ಹೆಸರಿನ ಆಸ್ತಿಗಳು ಎಂದರೆ ಊರಿನಲ್ಲಿರುವ ಎರಡು ಮನೆಗಳು.

2. ನನ್ನ ತಂದೆ ಮತ್ತು ನಾನು ವ್ಯವಸಾಯವನ್ನು ಹೊರತು ಪಡಿಸಿ ಇತರೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿ ನಾವುಗಳೆಲ್ಲಾರೂ ಮಾವಿನ ಕಾಯಿಯ ವ್ಯಾಪಾರ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ಮಾವಿನ ಕಾಯಿಯ ವ್ಯಾಪಾರವನ್ನು ಮಾಡುತ್ತಿದ್ದೇವು ಎಂದು ಹೇಳಿದ್ದೇನೆ. ವಾದಪತ್ರದಲ್ಲಿ ಮಾವಿನ ಕಾಯಿಯ ವಾಪಾರ ಮಾಡುತ್ತಿದ್ದೇವು ಎಂದು ಹೇಳದೇ ಇದ್ದರೂ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾವಿನ ಕಾಯಿ ವ್ಯಾಪಾರ ಮಾಡುತ್ತಿದ್ದೇವು ಎಂದು ತೋರಿಸಲು ದಾಖಲೆಗಳು ನಮ್ಮ ತಂದೆ ಮತ್ತು ಅಣ್ಣನ ಬಳಿ ಇರುವುದರಿಂದ ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ. ಆ ದಾಖಲೆಗಳು ನಮ್ಮ ತಂದೆ ಮತ್ತು ಅಣ್ಣನ ಬಳಿ ಇದೆ

ಎಂದು ಈ ಕೇಸನ್ನು ದಾಖಲಿಸಿದಾಗ ಹೇಳಿದ್ದೇನೆ. ಯಾವುದೇ ಮಾವಿನ ಕಾಯಿಯ ವ್ಯಾಪಾರವನ್ನು ನಾವುಗಳು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮಾವಿನ ಕಾಯಿಯ ವ್ಯಾಪಾರ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳು ನಮ್ಮ ಬಳಿ ಇಲ್ಲ ಎಂದರೆ ಸಾಕ್ಷಿ ಈಗಲೂ ಮಾವಿನ ಕಾಯಿಯ ವ್ಯಾಪಾರ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಮಾವಿನ ಕಾಯಿಯ ವ್ಯಾಪಾರವನ್ನು ಈಗ ನಾನು ಮಾಡುತ್ತಿರುವ ಬಗ್ಗೆ ನನ್ನ ಬಳಿ ದಾಖಲೆಗಳು ಇವೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಾನು ಈಗಾಲೂ ಮಾವಿನ ಕಾಯಿಯ ವ್ಯಾಪಾರವನ್ನು ಮಾಡುತ್ತಿಲ್ಲ ಮತ್ತು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ.

3. ದಾವಾ ಐಟಂ.ನಂ.1 ರಿಂದ 6 ನ್ನು ನಮ್ಮ ತಾತ ಸಂಪಾದನೆ ಮಾಡಿದ ಕಾಲದಿಂದಲೂ ಇರುವ ಆರ್ ಟಿ ಸಿಗಳನ್ನು ಈ ಕೇಸಿನಲ್ಲಿ ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಐಟಂ.ನಂ.1 ರಿಂದ 6 ರ ಆಸ್ತಿಗಳಿಗೆ ನೀರಿನ ಸೌಕರ್ಯ ಇಲ್ಲ ಎಂದರೆ ಸಾಕ್ಷಿ ದಾವಾ ಐಟಂ.ನಂ.2 ರಲ್ಲಿ ಬೋರ್ ವೆಲ್ ಹಾಕಿಸಿದ್ದೇವೆ ಎಂದು ನುಡಿಯುತ್ತಾರೆ. ಆ ಆಸ್ತಿಯಲ್ಲಿ ಬೋರ್ ವೆಲ್ ಇದೆ ಎಂದು ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿ. ನೀರಿನ ಸೌಲಭ್ಯ ಯಾವ ಜಮೀನಿಗೂ ಇಲ್ಲದೇ ಇದ್ದರೂ ಬೋರ್ ವೆಲ್ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಮತ್ತು ನನ್ನ ತಂದೆ 2015 ರಿಂದ ಬೇರೆ ಬೇರೆ ಇದ್ದೇವೆ. 1983-84 ನೇ ಸಾಲಿನಲ್ಲಿ ನಮ್ಮ ಕುಟುಂಬದಲ್ಲಿ ಏನು ನಡೆದಿದೆ ಎಂದು ನನಗೆ ಗೊತ್ತಿಲ್ಲ. ಆ ಸಾಲಿನಲ್ಲಿ ಏನು ನಡೆದಿದೆ ಎಂದು ನಮ್ಮ ವಕೀಲರಿಗೂ ಮಾಹಿತಿಯನ್ನು ನೀಡಿಲ್ಲ. ನಮ್ಮ ತಂದೆಗೆ ಆರು ಜನ ಸಹೋದರರು. ನಮ್ಮ ತಂದೆಯ ಸಹೋದರರು ನಾವು ಚಿಕ್ಕವರಿದ್ದಾಗಲೇ ವಿಭಾಗ

ಮಾಡಿಕೊಂಡಿದ್ದರಿಂದ ಅವರನ್ನು ಈ ಕೇಸಿನಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ. ನಮ್ಮ ತಂದೆ ಮತ್ತು ಅವರ ಸಹೋದರರರು ಯಾವ ರೀತಿ ವಿಭಾಗ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಮತ್ತು ಅವರ ಸಹೋದರರ ನಡುವೆ ಆಸ್ತಿಗಳಿಗೆ ಸಂಬಂಧಿಸಿದಂತೆ ಈಗಲೂ ತಕರಾರು ನಡೆಯುತ್ತಿದೆ ಎಂದರೆ ಸುಳ್ಳು, ನಮ್ಮ ತಂದೆ ಮತ್ತು ಅವರ ಸಹೋದರರ ನಡುವೆ ವಿಭಾಗದ ದಸ್ತಾವೇಜು ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ.

5. ನಮ್ಮ ತಾತ ದಾವಾ ಐಟಂ.ನಂ.1 ರಿಂದ 6 ನ್ನು ಹೊರತು ಪಡಿಸಿ ಬೇರೆ ಯಾವ ಆಸ್ತಿಗಳನ್ನು ಸಂಪಾದಿಸಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಈ ದಾವೆಯನ್ನು ಭಾಗ ನೀಡದೇ ಇದ್ದರಿಂದ ನನ್ನ ಮಾವನವರನ್ನು ಕೇಳಿ ಹಾಕಿದ್ದೇನೆ. ನಾನು 9 ನೇ ತರಗತಿಯವರೆಗೆ ಕಲಿತಿದ್ದೇನೆ. 3 ನೇ ಪ್ರತಿವಾದಿಯ ಗಂಡ ಚಿಂತಾಮಣಿಯ ಸರ್ಕಾರಿ ಕಾಲೀಜಿನಲ್ಲಿ ಡಿಪ್ಲೊಮೋ ಕಲಿತಿದ್ದರು. 3 ನೇ ಪ್ರತಿವಾದಿಯ ಗಂಡ ನನ್ನ ಅಣ್ಣ. 3 ನೇ ಪ್ರತಿವಾದಿಯ ಗಂಡ ಡಿಪ್ಲೊಮೋ ಪದವಿ ಪಡೆದ ನಂತರ ಬೆಂಗಳೂರಿನ ಐಬಿಬಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. 3 ನೇ ಪ್ರತಿವಾದಿಯ ಗಂಡನಿಗೆ ಸಂಬಳ ಬರುತ್ತಿತ್ತು ಎಂದರೆ ಸರಿ. 3 ನೇ ಪ್ರತಿವಾದಿಯ ತವರು ಮನೆ ಬೆಂಗಳೂರು. 3 ನೇ ಪ್ರತಿವಾದಿಯ ತಂದೆಗೆ ಬೆಂಗಳೂರಿನಲ್ಲಿ ಆಸ್ತಿ ಇದೆ ಎಂದರೆ ಸರಿ. 3 ನೇ ಪ್ರತಿವಾದಿಯ ತಂದೆ ಅನುಕೂಲಸ್ಥರು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ತಂದೆಯ ಕುಟುಂಬ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಗಂಡ ಕೊಲೆಯಾಗಿ ಮೃತ ಪಟ್ಟ ಎಂದರೆ ಸರಿ. ಆ ಬಗ್ಗೆ ಪ್ರಕರಣ ಬೆಂಗಳೂರಿನ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ 3 ನೇ ಪ್ರತಿವಾದಿಯ ಗಂಡನನ್ನು ಆಗದವರು ಕೊಲೆ ಮಾಡಿದ್ದರು ಎಂದರೆ ಸಾಕ್ಷಿ ಆತನ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿರಲಿಲ್ಲ ಎಂದು

ನುಡಿಯುತ್ತಾರೆ. 3 ನೇ ಪ್ರತಿವಾದಿಯ ಗಂಡ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ದಾವಾ ಐಟಂ.ನಂ.7 ಮತ್ತು 8 ಬೆಂಗಳೂರಿನಲ್ಲಿ ಇರುವ ಆಸ್ತಿಗಳು ಎಂದರೆ ಸರಿ. ಆ ಆಸ್ತಿಗಳು 3 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿಯೇ ಇವೆ ಎಂದರೆ ಸರಿ. ಆ ಆಸ್ತಿಗಳನ್ನು 2004 ಮತ್ತು 2013 ರಲ್ಲಿ ಖರೀದಿಸಿರುತ್ತಾರೆ. 3 ನೇ ಪ್ರತಿವಾದಿಯ ಗಂಡ ಆ ಸಮಯದಲ್ಲಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 3 ನೇ ಪ್ರತಿವಾದಿಯ ಗಂಡನ ಖಾತೆಯಲ್ಲಿ 1997 ರಿಂದ ಲಕ್ಷಾಂತರ ರೂಪಾಯಿಯ ವಹಿವಾಟು ನಡೆದಿತ್ತು ಎಂದರೆ ಸಾಕ್ಷಿ ನಮ್ಮ ಅಣ್ಣ ಮತ್ತು ನಮ್ಮ ತಂದೆಯ ನೇತೃತ್ವದಲ್ಲಿಯೇ ವ್ಯವಹಾರ ನಡೆಯುತ್ತಿತ್ತು ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯ ಗಂಡನ ಖಾತೆಯಲ್ಲಿ 1997 ರಿಂದ ಲಕ್ಷಾಂತರ ರೂಪಾಯಿಯ ವಹಿವಾಟು ನಡೆಯುತ್ತಿತ್ತು ಎಂದು ಪುನಃ ಕೇಳಲಾಗಿ ಸಾಕ್ಷಿ ನನ್ನ ಅಣ್ಣ ಕೆಲಸಕ್ಕೂ ಹೋಗುವ ಮೊದಲಿನಿಂದಲೂ ಆತನ ಖಾತೆಯಲ್ಲಿ ವ್ಯವಹಾರ ನಡೆಯುತ್ತಿತ್ತು ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯ ಗಂಡನ ಖಾತೆಯಲ್ಲಿ 1997 ರಲ್ಲಿ ಲಕ್ಷಾಂತರ ರೂಪಾಯಿ ಇತ್ತು ಎಂದರೆ ಸರಿ. ನನ್ನ ಅಣ್ಣನ ಕೆನರಾ ಬ್ಯಾಂಕ್, ಕಾರ್ಪೋರೇಷನ್ ಬ್ಯಾಂಕ್ ಗಳಲ್ಲಿ ನಡೆಯುತ್ತಿತ್ತು, ಇತರ ಬ್ಯಾಂಕ್ ಗಳಲ್ಲಿ ನಡೆಯುತ್ತಿತ್ತು ನನಗೆ ಅವರು ಹೇಳುತ್ತಿರಲಿಲ್ಲ ಎಂದು ನುಡಿಯುತ್ತಾರೆ.

7. ಈ ಕೇಸನ್ನು ದಾಖಲಿಸಿಸುವಾಗ ನನ್ನ ಅಣ್ಣ ಯಾವ ಯಾವ ಬ್ಯಾಂಕ್ ಗಳಲ್ಲಿ ಹಣದ ವ್ಯವಹಾರವನ್ನು ಮಾಡುತ್ತಿದ್ದ ಎಂದು ನಾನು ತಿಳಿದುಕೊಂಡಿಲ್ಲ. ಈ ಕೇಸನ್ನು ದಾಖಲಿಸುವಾಗ ನನ್ನ ಅಣ್ಣ ಮತ್ತು ತಂದೆಯ ನೇತೃತ್ವದಲ್ಲಿ ವ್ಯವಹಾರ ನಡೆಯುತ್ತಿತ್ತು ಎಂದು ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ವಕೀಲರಿಗೆ ಹೇಳಿದ್ದೆ ಎಂದು ನುಡಿಯುತ್ತಾರೆ ನನ್ನ

ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿದ್ದೇನೆ ಪ್ರಮಾಣ ಪತ್ರದಲ್ಲಿರುವ ವಿಚಾರಗಳನು ತಿಳಿದುಕೊಂಡಾಗ ನಮ್ಮ ತಂದೆಗೆ ಸಂಬಂಧಿಸಿದ ವಿಚಾರಗಳನ್ನು ಹೇಳಿಲ್ಲ ಎಂದು ನಮ್ಮ ವಕೀಲರಿಗೆ ಕೇಳಿದ್ದೆ. ನನ್ನ ತಂದೆ ಮತ್ತು ಅಣ್ಣನ ಮದ್ಯೆ ಹಣಕಾಸಿನ ವ್ಯವಹಾರ ನಡೆಯುತ್ತಿತ್ತು ಎಂದು ಈ ಕೇಸಿನಲ್ಲಿ ಹೇಳದೇ ಇದ್ದರೂ ಹೇಳಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ನನ್ನ ಅಣ್ಣನ ಜೊತೆ ಹಣದ ವ್ಯವಹಾರ ಮಾಡುತ್ತಿದ್ದರೂ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಇವೆ ಎಂದು ನುಡಿಯುತ್ತಾರೆ. ನನ್ನ ತಂದೆ ಬ್ಯಾಂಕ್ ನ ಮೂಲಕ ಹಣವನ್ನು ನನ್ನ ಅಣ್ಣನಿಗೆ ಕಳುಹಿಸುತ್ತಿದ್ದರು. ನನ್ನ ತಂದೆ ಮುರಗಮಲ್ಲದ ಕೆನರಾ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದಾರೆ. ಆ ಖಾತೆಯ ಸಂಖ್ಯೆ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ಯಾವುದೇ ಬ್ಯಾಂಕ್ ಖಾತೆಯನ್ನು ಹೊಂದದೆ ಇದ್ದರೂ ಖಾತೆಯ ಮೂಲಕ ಹಣ ಕಳುಹಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನನ್ನ ಅಣ್ಣ ವೆಂಕಟಶಿವ ರವರ ಖಾತೆಗೆ ನಮ್ಮ ತಂದೆಯ ಕಡೆಯಿಂದ ಮತ್ತು ನಮ್ಮ ಕುಟುಂಬದ ಕಡೆಯಿಂದ ಒಂದು ರೂಪಾಯಿಯೂ ಸಂದಾಯವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನ ಖಾತೆಯಲ್ಲಿರುವ ಹಣ ಆತನಿಗೆ ಆತನ ಸಂಬಳದಿಂದ ಮತ್ತು ರಿಯಲ್ ಎಸ್ಟೇಟ್ ವ್ಯವಹಾರದಿಂದ ಬಂದಿತ್ತು ಎಂದರೆ ಸುಳ್ಳು, ದಾವಾ ಐಟಂ.ನಂ.7 ಮತ್ತು 8 ರಲ್ಲಿ ನಿರ್ಮಿಸಿರುವ ಮನೆಯನ್ನು ನನ್ನ ಅಣ್ಣ ಆತನ ಸಂಪಾದನೆ ಮತ್ತು ಆತನ ಹೆಂಡತಿ 3 ನೇ ಪ್ರತಿವಾದಿಯ ತಂದೆಯ ಸಹಾಯದಿಂದ ನಿರ್ಮಿಸಿದ್ದಾರೆ ಎಂದರೆ ಸುಳ್ಳು

9. ದಾವಾ ಐಟಂ.ನಂ.11 ರಿಂದ 13 ನನ್ನ ಅಣ್ಣನ ಹೆಸರಿನಲ್ಲಿವೆ ಎಂದರೆ ಸರಿ. ಆ ಆಸ್ತಿಗಳನ್ನು ಸಹ ನನ್ನ ಅಣ್ಣ ತನ್ನ ಸ್ವಂತ ಸಂಪಾದನೆಯಿಂದ ಖರೀದಿಸಿದ್ದ ಎಂದರೆ ಸರಿಯಲ್ಲ.

ಒಟ್ಟು ಕುಟುಂಬಕ್ಕೆ ಇಂತಿಷ್ಟು ಆದಾಯ ಇತ್ತು ಎಂದು ನನ್ನ ವಾದ ಪತ್ರದಲ್ಲಿ ನಾನು ತಿಳಿಸಿಲ್ಲ ಎಂದರೆ ಸರಿಯಲ್ಲ. ಆದಾಯದ ವಿಚಾರವನ್ನು ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿ ವಕೀಲರಿಗೆ ತಿಳಿಸಿದ್ದೇನೆ ಎಂದು ನುಡಿಯುತ್ತಾರೆ. ನೀರಾವರಿ ಆಶ್ರಯ ಇಲ್ಲದೇ ಇದ್ದರಿಂದ ಯಾವುದೇ ಬೆಳೆ ಬರುತ್ತಿರಲಿಲ್ಲ ನಮಗೆ ಜೀವನ ಮಾಡಲು ಸಹ ತೊಂದರೆ ಇತ್ತು ಎಂದರೆ ಸರಿಯಲ್ಲ. ದಾವಾ ಐಟಂ.ನಂ.1 ರಿಂದ 6 ರಲ್ಲಿ ನನಗೆ ಆದಾಯ ಇತ್ತು ಎಂದು ತೋರಿಸಲು ದಾಖಲೆಗಳು ಇಲ್ಲ ಎಂದರೆ ಸಾಕ್ಷಿ ನನ್ನ ತಂದೆ ಮತ್ತು ನನ್ನ ಅಣ್ಣ ಎಲ್ಲಾವನ್ನೂ ನಿರ್ವಹಿಸುತ್ತಿದ್ದರು ಎಂದು ನುಡಿಯುತ್ತಾರೆ.

10. ನನ್ನ ತಂದೆ ನನ್ನ ಅಣ್ಣನ ಜೊತೆ ಹಣಕಾಸಿನ ವ್ಯವಹಾರ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೇ ದಾಖಲೆಗಳು ಇಲ್ಲದ ಕಾರಣ ನಾನು ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆ ಮತ್ತು ನನ್ನಅಣ್ಣನೇ ವ್ಯವಹಾರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಯನ್ನು ನಾನು ಭಾಗ ಕೇಳಿದಾಗಿನಿಂದ ಮಾತನಾಡಿಸುವುದಿಲ್ಲ.

11. ನನ್ನ ಅಣ್ಣನ ಹೆಸರಿನಲ್ಲಿ ಸೈಟ್ ಇರುವುದರಿಂದ 5 ನೇ ಪ್ರತಿವಾದಿಯನ್ನು ಈ ಕೇಸಿನಲ್ಲಿ ಸೇರಿಸಿದ್ದೇನೆ. ಆ ಸೈಟ್ ನ ವಿಸ್ತೀರ್ಣ 30 X 40 ಆಗಿರುತ್ತದೆ, ಚೆಕ್ಕುಬಂದಿ ಗೊತ್ತಿಲ್ಲ. ಆ ಸೈಟ್ ನ್ನು ಈ ಕೇಸಿನಲ್ಲಿ ತೋರಿಸಿಲ್ಲ ಎಂದರೆ ಸರಿ. ನನ್ನ ಅಣ್ಣ ವೆಂಕಟಶಿವ ಬದುಕಿದ್ದಾಗ ಸಂಪಾದಿಸಿದ ಆಸ್ತಿಗಳನ್ನು ಅವರು ತೀರಿಕೊಂಡ ಬಳಿಕ ಕಬಳಿಸಬೇಕೆಂಬ ಉದ್ದೇಶದಿಂದ ಈ ಕೇಸನ್ನು ನನ್ನ ತಂದೆ ಮತ್ತು ನಾನು ಸೇರಿ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನಾನು ಚೆನ್ನಾಗಿ ಇದ್ದರೂ ಸಹ ಮಾತನಾಡುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ 2015 ರಲ್ಲಿ ಕೊಲೆಯಾಗಿದ್ದ. ಆತನನ್ನು ಯಾರು ಕೊಲೆ

ಮಾಡಿದ್ದರು ಎಂದು ನಾನು ಬೇಗೂರಿನಲ್ಲಿ ನನ್ನ ಅತ್ತಿಗೆ ಮತ್ತು ಪೋಲೀಸ್ ನವರನ್ನು ವಿಚಾರಿಸಿದ್ದೆ. ನನ್ನ ಅಣ್ಣನನ್ನು ನನ್ನ ತಾಯಿಯ ತಂಗಿಯ ಮಗ ಆನಂದ್ ಕೊಲೆ ಮಾಡಿದ್ದರು ಎಂದು ತಿಳಿಯಿತು. ನನ್ನ ಅಣ್ಣ ವೆಂಕಟಶಿವ ಚೆನ್ನಾಗಿ ಬದುಕುತ್ತಿದ್ದಾನೆ ಎಂಬುದನ್ನು ಸಹಿಸಲಾರದೇ ಆತನಿಗೆ ಕಷ್ಟ ನೀಡಿದ್ದೇವು ಎಂದರೆ ಸರಿಯಲ್ಲ.

12. ದಾವಾ ಐಟಂ.ನಂ.1 ರಿಂದ 6 ರಲ್ಲಿ ನನ್ನ ಅಣ್ಣ, ಆತನ ಹೆಂಡತಿ ಮತ್ತು ಮಗನಿಗೆ ಹಕ್ಕು ಇದೆ ಎಂದರೆ ಸರಿ. ದಾವಾ ಐಟಂ.ನಂ.7 , 8 ಮತ್ತು 11 ರಿಂದ 13 ರಲ್ಲಿ ನನಗೆ, 1 ಮತ್ತು 2 ನೇ ಪ್ರತಿವಾದಿಯರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ.ನಂ.7, 8 ಮತ್ತು 11 ರಿಂದ 13 ರಲ್ಲಿ ಕೇವಲ ನನ್ನ ಅಣ್ಣನ ಹೆಂಡತಿ ಮತ್ತು ಮಗನಿಗೆ ಮಾತ್ರ ಸಂಬಂಧ ಇದೆ ಎಂದರೆ ಸರಿಯಲ್ಲ. ನನ್ನ ಅಣ್ಣ ವೆಂಕಟಶಿವ ಸಂಪಾದಿಸಿರುವ ಆಸ್ತಿಯನ್ನು ನಮಗೆ ಹಕ್ಕು ಇಲ್ಲದೇ ಇದ್ದರೂ ಸೇರಿಸಿ ಈ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದ ಪರ ಶ್ರೀ ಎನ್ ಎ ಎನ್ ವಕೀಲರಿಂದಃ**

ಈ ಕೇಸನ್ನು ದಾಖಲಿಸುವ ಸಮಯದಲ್ಲಿ 1 ಮತ್ತು 2 ನೇ ಪ್ರತಿವಾದಿಯರನ್ನು ಯಾವುದೇ ಭಾಗ ಕೇಳಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

ನನ್ನ ಉಕ್ತಲೇಖನದ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ